Weekly Newspaper

SATYAVADI

Every Wednesday

MYSORE (Founded 1917) 12—2—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಿಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ, ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣ ವಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟಾಂಪನ್ನಿಟ್ಟು ವಿಶೇಷ ಮಾಹಿತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Shiromani NARAYANACHARYA

Chowkambha, Benarese.

S.U.N. & CO. BENARES CITY.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರೆಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮ್ಮಾಗಿ ಕಳುಹಿಸುತ್ತೇವೆ- 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಿಸ್ [ಕಾಶಿ]

H. S- KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow teeth with gold and silver a speciality. Every work is done to entire satisfction.

ಸತ್ಯವಾದಿಯ ವಿಜೆಟ್ಟರು.

ವ॥ ಅನಂತರಾಮಯ್ಯನವರು,

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು.

ಕುಪೂರ್ ಅಂಡ್ ಬ್ರದರ್ಸ್

ಒಲೇಪೆಟೆ, ಬೆಂಗಳೂರು.

ಪ್ರೇಮದ ಕಥೆ

(ಲೇಖಕರು—ಕೆ. ಎಸ್. ನರಸಿಂಹಯ್ಯ)

ಹಾಸಿಗೆಯಲ್ಲಿ ಜ್ಞಾನವಿಲ್ಲದೆ ಬಿದ್ದಿದ್ದನು ರಾಮು. ಹಿಂದಿನ ದಿನ ಬೀದಿಯಲ್ಲಿ ಮೋಟಾರಿಗೆ ಸಿಕ್ಕಿ ಆಸ್ಪತ್ರೆಯ ಹಾಸಿಗೆ ಸೇರಿದ್ದನು, ರಾತ್ರಿ. ಎರಡು ದಿನಗಳಾದರೂ ಜ್ಞಾನವು ಬರಲೇ ಇಲ್ಲ. ಡಾಕ್ಟರುಗಳು ತಮ್ಮ ಬುದ್ಧಿ, ಶಕ್ತಿಗಳನ್ನೆಲ್ಲಾ ವೆಚ್ಚ ಮಾಡಿದರೂ ಯಾವ ಮಾರ್ಪಾಡೂ ತೋರಲಿಲ್ಲ. ಅವನ ಆಸೆಯನ್ನು ಅವರು ಬಿಡಬೇಕಾಯಿತು. ಇಷ್ಟು ಚಿಕ್ಕ ವಯಸ್ಸಿನ ತರುಣನ ಪ್ರಾಣಪಕ್ಷಿಯು ಮಾಯವಾಗುವುದು ಎಷ್ಟರವರೆಟ್ಟಿಗೂ ಅವರಿಗೆ ಇಷ್ಟವಿಲ್ಲ. ತಮ್ಮ ಕೈಬಿಟ್ಟು ಹೋದರೂ ದೇವರನ್ನು ಸಹಾಯಕ್ಕೆ ಕರೆದರು ಡಾಕ್ಟರುಗಳು!

ಮೂರನೇ ದಿನ ಬೆಳಿಗ್ಗೆ ರಾಮುವನ್ನು ನೋಡಲು ಡಾಕ್ಟರುಗಳು ಬಂದರು. ದೇವರನ್ನು ತಮ್ಮ ಪ್ರಾರ್ಥನೆ ಮಟ್ಟಿಗೆ ಎಂದುಕೊಂಡರು. ರೋಗಿಯ ಸ್ಥಿತಿಯು ಸ್ವಲ್ಪ ಒದಲಾಯಿಸಿದ್ದರೂ ಪೂರ್ಣಭರವಸೆ ಕೊಡಲು ಅವಕಾಶವಿರಲಿಲ್ಲ. ಸ್ವಲ್ಪ ಸ್ವಲ್ಪ ಜ್ಞಾನ ಬಂದಿತ್ತು, ರಾಮುಗೆ. ನರ್ಸನ್ನು ನೋಡಿ 'ಏನು ವಿಶೇಷ ರಾತ್ರಿ?' ಎಂದು ಕೇಳಿದರು. ಅದಕ್ಕೆ ಆಕೆ 'ನಿನ್ನೆ ರಾತ್ರಿ ಸ್ವಲ್ಪ ವಾಸಿ. ಎರಡುಸಲ ರೋಗಿಯು ಕಣ್ಣುತೆರೆದಿದ್ದನು. ಸಮಾರು ಕಾಲುಘಂಟೆಯ ರೆಗೆ ಜ್ಞಾನವಿತ್ತು. ಸ್ವಲ್ಪ ಕನವರಿಸಿದನು. ರೋಗಿಯು ಎರಡುಸಲ 'ಸರೋಜ' ಎಂದು ಕೂಗಿಕೊಂಡನು. ತಿರುಗಿ ಕಣ್ಣು ಬಿಟ್ಟಿಲ್ಲ ಈವರೆಗೆ' ಎಂದಳು ಡಾಕ್ಟರುಗಳು ಪುನಃ ರೋಗಿಯನ್ನು ಪರೀಕ್ಷಿಸಿ ರೋಗಿಯನ್ನು ಹುಷಾರಾಗಿ ನೋಡಿಕೊಳ್ಳಬೇಕೆಂದು ನರ್ಸಿಗೆ ಅಪ್ಪಣೆ ಕೊಟ್ಟು ಹೊರಟರು. ನಾಲ್ಕು ಹೆಜ್ಜೆ ಇಡುವಷ್ಟರಲ್ಲಿ ನರ್ಸು ಬಂದು ಅವರನ್ನು ನಿಲ್ಲಿಸಿ ರೋಗಿಯ ಕಡೆ ಬೆರಳು ತೋರಿಸಿದಳು. ರೋಗಿಯ ಹತ್ತಿರ ಒಂದರು ಡಾಕ್ಟರುಗಳ. ಕಣ್ಣು ಬಿಟ್ಟ ರೋಗಿ ಸುತ್ತಲೂ ನೋಡಿದ ಕಣ್ಣುಗಳು ಮುಚ್ಚಿದವು ಕಾಲುಘಂಟೆಯಾದಮೇಲೆ ಕಣ್ಣುಗಳು ಅರಳಿದವು. ಈಸಲ ತಕ್ಷಣವೇ ಮುಚ್ಚಲಿಲ್ಲ 'ಸರೋಜ' ಎಂದು ಮೂರುಸಲ ಕೂಗಿಕೊಂಡ ರೋಗಿ. ಆಯಾಸವಾಯಿತ. ಕಣ್ಣುಗಳು ಮುಚ್ಚಿದವು. ಪಕ್ಕಕ್ಕೆ ಬುರುಳಿತು ದೇಹವು. ಜ್ಞಾನವು ತಪ್ಪಿತು. ಡಾಕ್ಟರುಗಳು ಯೋಚಿಸಿದರು. ಮಂಜುಗಡ್ಡೆ ಚೀಲವನ್ನಿಟ್ಟರು ರೋಗಿಯ ತಲೆಯಮೇಲೆ. ಪುನಃ ನರ್ಸಿಗೆ ಜಾಗ್ರತೆಯಾಗಿರುವಂತೆ ಅಪ್ಪಣೆಕೊಟ್ಟು ಹೊಂಟು ಹೋದರು.

ಸಾಯುಂಕಾಲ ಬಂದರು ಡಾಕ್ಟರುಗಳ. ರೋಗಿಯನ್ನು ನೋಡಿದರು ಏನೂ ಬದಲಾವಣೆಯಿಲ್ಲ. ನಿಟ್ಟುಸಿರ ಬಿಟ್ಟರು ರೋಗಿಯು ಕಣ್ಣು ತೆರೆದು 'ಸರೋಜ' ಎಂದು ಕೂಗಿದ ತೆರಿದ, ಕಣ್ಣುಗಳು ಮುಚ್ಚಿದವು. ಡಾಕ್ಟರುಗಳು ಮೂಗುವೇಲೆ ಬೆರಳಿಟ್ಟರು, ಮರುಮಾತಿಲ್ಲದೆ ಹೊರಟರು. ನಾಲ್ಕು ಹೆಜ್ಜೆ ಇಡುವಷ್ಟರಲ್ಲಿ ನಮಸ್ಕಾರ ಎಂದು ಬಿಕ್ಕು, ಡಾಕ್ಟರುಗಳ ಕಿವಿಯಲ್ಲಿ; ತಲೆ ಎತ್ತಿ ನೋಡಿದರು. ಹದಿನೆಂಟು ವರ್ಷದ ಬಾಡಿದ ಮುಖದ ಬ್ಬು ತರುಣಿಯು ನಿಂತಿದ್ದಳು. 'ಏನು ಬೇಕಮ್ಮ?' ಎಂದು ಕೇಳಿದರು ಚಿಕ್ಕ ಡಾಕ್ಟರು. 'ರಾಮೂರಾವ್' ಎಂಬ ರೋಗಿಯನ್ನು ನೋಡಬೇಕು? ಎಂದು ಉತ್ತರ ಕೊಟ್ಟಳು ಹುಡುಗಿ. 'ನೀವು ಈಗ ರೋಗಿಯನ್ನು ನೋಡುವುದಿಲ್ಲ. ಅತನ ಹತ್ತಿರ ಯಾರೂ ಹೋಗಕೂಡದು? ಎಂದರು ಡಾಕ್ಟರು. ಹುಡುಗಿಯ ಮುಖವು ಇನ್ನೂ ಬಾಡಿತು. ಕಣ್ಣುಗಳಿಂದ ನೀರು ಸರಿಯಿತು. ನೆಲದ ಮೇಲೆ ಬಿದ್ದಿತು ದೇಹವು. ಅರ್ಧ ಮುಖವೆತ್ತಿ 'ದಯವಿಟ್ಟು ರೋಗಿಯನ್ನು ನೋಡಲು ಅಪ್ಪಣೆ ಕೊಡಬೇಕು' ಎಂದು ದೀನ ವಾಣಿಯಿಂದ ಬೇಡಿದಳು. 'ನಿಮ್ಮ ಹೆಸರೇನು?' ಎಂದು ಕೇಳಿದರು ದೊಡ್ಡ ಡಾಕ್ಟರು. 'ಸರೋಜ' ಎಂದಳು ಹುಡುಗಿ. 'ರಾಮೂರಾವ್ ನಿಮಗೇನಾಗಬೇಕು?' ಎಂದು ಕೇಳಿದನು ಚಿಕ್ಕ ಡಾಕ್ಟರು. ಹುಡುಗಿಯ ತಲೆ ತಗ್ಗಿತು. 'ಸದ್ದು ಮಾಡದೆ ಹೋಗಿ ನೋಡಿ' ಎಂದರು ದೊಡ್ಡ ಡಾಕ್ಟರು. ಹುಡುಗಿಯು ಅವಸರ ಅವಸರವಾಗಿ ನಡೆದು ಅಲ್ಲಿ ರೋಗಿಯ ಹಾಸಿಗೆಯನ್ನು ಸೇರಿದಳು. ರೋಗಿಯನ್ನು ಒಂದೇ ದೃಷ್ಟಿಯಿಂದ ನೋಡಿದಳು. ತಲೆ ತಿರುಗಿತು. ಕಾಲುಗಳ ಶಕ್ತಿಯು ಮಾಯವಾಗಲು ಹ್ಯಾಸಿಗೆಯ ಪಕ್ಕಕ್ಕೆ ಕೈಯಿರಿಸಿಕೊಂಡು ನಿಂತಳು. ನರ್ಸು ಆಕೆಯನ್ನು ಹೊರಗೆ ಕಳುಹಿಸಬೇಕೆಂದು ಮುಂದಕ್ಕೆ ಬಂದಳು. ಡಾಕ್ಟರುಗಳು ಬೇಡವೆಂದು ಕೈಸನ್ನೆ ಮಾಡಿದರು. ರೋಗಿಯನ್ನು ಎವೆಯಿಕ್ಕದೆ ನೋಡುತ್ತಿದ್ದಳು ಸರೋಜ. ರೋಗಿಯು ಕಣ್ಣು ಬಿಟ್ಟ. ನಾಲ್ಕು ಕಣ್ಣುಗಳೂ ಒಟ್ಟುಗೂಡಿದವು. ಪ್ರೇಮದ ಸೋಟ! 'ಸರೋಜ' ಅಂದ ರೋಗಿ ವೇತ್ತಗೆ. ಹುಡುಗಿ ತಲೆಯಾಡಿಸಿದಳು. ರೋಗಿ ಬಲಗೈ ಎತ್ತಲು ಪ್ರಯತ್ನಿಸಿದ. ಅದು ಸ್ವಲ್ಪ ಎದ್ದು ಹಾಸಿಗೆಯ ಮೇಲೆ ಬಿತ್ತು. ಸರೋಜ ರೋಗಿಯ ಬಲಗೈಯನ್ನು ಹಿಡಿದುಕೊಂಡಳು. ವೇತ್ತಗೆ ರಾಮು ಹುಡುಗಿಯ ಬಲಗೈಯನ್ನು ತನ್ನ ತೊಡೆಯಮೇಲೆ ಇಟ್ಟುಕೊಂಡ, ಕಣ್ಣುಗಳು ಮುಚ್ಚಿದವು. ಹುಡುಗಿಯ ಎಡಗೈ ರೋಗಿಯ ತಲೆಯನ್ನು ಸೇರಿತು. ರಾಮು ಕಣ್ಣುಬಿಟ್ಟ! ನಾಲಿಗೆಯಿಂದ ತುಟಿಯನ್ನು ಸವರಿದ. ನರ್ಸು ತಕ್ಷಣ ಹಾಲನ್ನು ಕುಡಿಸಿದಳು 'ಸರೋಜ!' ಎಂದು ಕೂಗಿದ ರೋಗಿ. ಹುಡುಗಿ ತಲೆಯಾಡಿಸಿದಳು. ಸರೋಜನ ಕಣ್ಣುಗಳಿಂದ ಪ್ರೇಮರಸವು ಉಕ್ಕಿ ಹರಿದ. ರೋಗಿಯನ್ನು ಸೆರಿತು. ರೋಗಿಗೆ ಬಂಕು ನೂರರಷ್ಟು ಶಕ್ತಿ! ಡಾಕ್ಟರುಗಳು ಚಕಿತರಾದರು. 'ಪ್ರೇಮವೆಂಬುದು ಎಂತಹದ್ದು? ಎನ್ನುತ್ತ ಹೊರಟು ಹೋದರು ಡಾಕ್ಟರುಗಳು!

ಬೀಡಿಯ ಕೇಡು

(ಭಾ. ಷ.)

ಬೀಡಿ ಬಂದಿತು ನಮ್ಮ ಜನರಲಿ
ಬೀಡು ಮಾಡಿತು ರೋಗರುಜಿಗಳ
ನೀಡಿಕೊಂಡಿತು ತೀಡಿ ತಿಂದಿತು ತನ್ನಭಕುತನನೂ ‖
ಬಡವನು ಬಳಲಿಸಲು ಬೀಡಿಯು
ಒಡನೆ ತಂಬಕು ಹಿಡಿಯು ಭೃಂಗಿಯು
ಕೂಡಿತವೆಲ್ಲವು ಬಿಡದೆ ಬಂದವು ಕಡೆಗೆ ಕೆಡಿಸಿದವೊ‖೧‖

ಬೀಡಿ ಬೀಡಿ ನೀಡಿ ಎನ್ನತ
ಬೀಡಿ ಬೆಂಕಿಯ ನೀಡಿ ಸುಡೆನರು
ಬೀಡಿ ಬಾಯಿಯು ಓವೆ ಮಾಡಿಯೆ ಹೊಗೆಯು
ಬಿಡುತಿಹರೂ ‖

ಬೀಡಿ ಜನರೆನು ಕಾಡಿ ಜನರನು
ಬೀಡಿ ಸೇದುತ ಹೊಗೆಯು ನುಂಗುತ
ಬೀಡಿ ಎಂದೇ ಹೇಳಿ ಸಾಯುವರು ತಮ್ಮ ದೇಹಗಳಾ‖

ಬೀಡಿ ಸಿಗರೆಟ್ ಭಂಗಿ ಸೇದಲು
ಸೋಡ ಕಳ್ಳು ಸರಾಯಿ ಕುಡಿಯಲು
ಕೇಡು ದೇಹಕೆ ಧನಕೆ ಮಾನಕೆ ಆತ್ಮದುನ್ನತಿಗೆ ‖
ಬೀಡಿ ಹೊಗೆಯನು ಕಡಿದದಾಗಲೆ
ನಾಡಿ ಬಡಿತವು ಕಫವು ಕೆಮ್ಮವು
ಕೂಡಿಪ್ಪರುವದು ಕಣ್ಣುಮುಂದವು ಕಟ್ಟಿಗಳೊಣಗುವ
ವೊ ‖ ೩ ‖

ಬೀಡಿ ಸೇದಲು ಬಾಯಿವಾಸನೆ
ಮಾಡಿ ಹಲ್ಲನು ಬೇಗವುದುರಿಸಿ
ಬೋಡ ಬಾಯಿಯ ಮಾಡಿಬಿಡುವುದ ಕಡೆಗೆ
ನಿಶ್ಚಯವೂ ‖

ಒಡನೆ ಕೇಡದು ತೋರದಿದ್ದರು
ಅಡಗಿಕೊಂಡಿಹ ಹುಲಿಯ ತೆರದಲಿ
ಕಡೆಗೆ ಸ್ವಮ್ಮನು ನಾಶವಾಡದೆ ಬಿಡದು ಬೀಡಿ
ಯದೂ ‖ ೪ ‖

ಬೀಡಿ ಗೊಡವೆಯೆ ಬೇಡ ನಿಮಗದು
ಬೇಡಿಯಾಗಿಯೆ ಕಾಡಿ ಕೊಲುವದು
ಬೇಡಿಕೊಂಬೆನು ಬೀಡಿ ಬಿಡುವರೆ ನಿಮ್ಮೆಲ್ಲವನ ‖
ನಡತೆಹೀನರ ಸಂಗ ಬೇಡವು
ಕುಡಿತ ಬೇಡವು ಜೂಜು ಬೇಡವು
ಕೆಡಿಪ ಜಟಗಳ ಹಾದಿ ನಿಮಗದು ಎಂದಿಗೂ ಬೇಡ ‖

(ಕಂ) ಮುದ್ರಾಡಿ ಕೃಷ್ಣಯ್ಯಸೆಟ್ಟಿ.

ಆಸ್ಟ್ರೇಲಿಯಾದಿಂದ ಜರ್ಮನಿಯವರು ತಮಗೆ ಬೇಕಾದ ಉಣ್ಣೆಯನ್ನು ವೋಟಾರು ವಾಹನಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಇದರಿಂದ ಬ್ರಿಟಿಷಿನ ವೋಟಾರು-ಕಾರುಗಳ ವ್ಯಾಪಾರವು ಬಿದ್ದಿರುತ್ತದೆ. ಆದರಿಂದ ಈ ಅಭ್ಯಾಸನನ್ನು ಬೇಗನೆ ನಿಲ್ಲಿಸಬೇಕಾಗಿ. ಅಲ್ಲಿನ ವ್ಯಾಪಾರ ಸಚಿವರು ಸೂಚನೆಯನ್ನು ಕೊಟ್ಟಿರುವರು; ಅಮೇರಿಕದ ಧನಾಢ್ಯರಿಂದ ನಡೆಯಿಸಲ್ಪಡುವ ಒಂದು ಜರ್ಮನಿಯ ವೋಟಾರು ಕಾರ್ಖಾನೆಯು ಈ ಅಭ್ಯಾಸದಿಂದ ಹೆಚ್ಚು ಲಾಭವನ್ನು ಸಂಪಾದಿಸುತ್ತದೆ.

ಸೂಚನೆ.

ಮುಂದಿನವಾರ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಮ್ಯಾನೇಜರ್

ಸತ್ಯವಾದಿ

ಅಭಿನಂದನೆ.

ಜಾರ್ಜ್ ಸಾಪ್-ಭೌಮರವರ ಮರಣಕ್ಕಾಗಿ ಪ್ರಪಂಚದಲ್ಲೆಲ್ಲಾ ದೇಶಭೇದಗಳಿಲ್ಲದೆ ಸಂತಾಪವನ್ನು ಸೂಚಿಸಿದರು. ಭರತಖಂಡದ ರಾಜಕೀಯ ಪಂಗಡಗಳೆಲ್ಲವೂ ಸಂತಾಪವನ್ನು ಸೂಚಿಸಿದವು. ಎಂಟನೇ ಎಡ್ವರ್ಡ್‌ರವರು ಪ್ರಭುಗಳಾದ ದಿನ್ನು ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಪ್ರಕಟಿಸಲ್ಪಟ್ಟಿತು. ಹೊಸದಾಗಿ ರಾಜಭಕ್ತಿ ಪ್ರಮಾಣಗಳು ಅಂಗೀಕಾರವಾದವು. ನೂತನ ಪ್ರಭುಗಳು ರಾಜವಂಶ ಮರ್ಯಾದೆಗಳನ್ನನುಸರಿಸಿ ಪೂರ್ವ ಚಕ್ರವರ್ತಿಗಳಂತೆಯೇ ರಾಜ್ಯಭಾರವನ್ನು ನಡೆಸುವರೆಂದು ಪ್ರಮಾಣವನ್ನು ಕೈಗೊಂಡರು. ಅವರಿಗೆ ಭಗವಂತನು ಆಯುರಾರೋಗ್ಯಭಾಗ್ಯ ವೃದ್ಧಿಮಾಡಿಸಿ ಅವರ ಕಾಲದಲ್ಲಿ ರಾಜ್ಯವು ನಿಮ್ಮದಿಯಾಗಿರುವಂತೆ ಪ್ರಾರ್ಥಿಸುತ್ತೇನೆ.

ಕಲ್ಕತ್ತಾ ಕಾರ್ಪೊರೇಷನ್ ಸಭೆಯಲ್ಲಿ ಹಿಂದೂ ಪಕ್ಷದಲ್ಲಿ ಡೆಪ್ಯೂಟಿ ಮೇಯರ್‌ರವರು ಜಾರ್ಜ್ ಸಾಪ್-ಭೌಮರವರು ಬಂಗಾಳ ವಿಭಜನೆಯನ್ನು ರದ್ದುಮಾಡಿದ ವಿಷಯವನ್ನು ವಿವರಿಸುತ್ತಾ "ಸ್ವರಾಜ್ಯ" ಎಂಬ ಪದವನ್ನು ಜಾರ್ಜ್ ಪ್ರಭುಗಳವರೇ ಅಂಗೀಕರಿಸಿದರು ಎಂದು ಹೇಳಿದ್ದರು. ಆ ಪದವು ಎಂಟನೇ ಎಡ್ವರ್ಡ್ ಪ್ರಭುಗಳ ಕಾಲದಲ್ಲಿ ನಿಶ್ಚಯವಾಗುವುದೆಂದು ಭಾರತೀಯರು ಆಶಿಸಿಡುವರು. ಈ ಆಶೆಯನ್ನು ಸಾರ್ವಭೌಮರೂ ಅವರ ಸರ್ಕಾರದವರೂ ಅಂಗೀಕರಿಸಿ ಅದಕ್ಕೆ ತಕ್ಕ ಕಾರ್ಯರಚನೆಯನ್ನು ಮಾಡುವರೆಂದು ನಂಬಿನಿರೀಕ್ಷಿಸುತ್ತೇನೆ.

ಕಳೆದ ತಿಂಗಳು ಚಿಕಾಗೋವಿನಲ್ಲಿ ಕೋರ್ಟಿನಲ್ಲಿ ಒಂದು ವ್ಯಾಜ್ಯದ ವಿಷಯವಾಗಿ ವಾದವಿವಾದಗಳು ನಡೆಯುತ್ತಿದ್ದವು. ವಾದವು ನಡೆದನಂತರ ಜಡ್ಜಿಯು ತೀರ್ಪನ್ನು ಕೊಟ್ಟನು. ಅದರಂತೆ ವಿವೇಚನಾದ ಲಾಯರು ರಿವಾಲ್ವರನ್ನು ತೆಗೆದುಕೊಂಡು ಜಡ್ಜಿಯ ಕಡೆಗೆ ಗುಂಡನ್ನು ಹಾರಿಸಿದನು. ಜಡ್ಜಿಯು ತಪ್ಪಿಸಿಕೊಂಡನು. ಸಮೀಪದಲ್ಲಿಯೇ ನಿಂತಿದ್ದ ಇನ್ನೊಬ್ಬ ಲಾಯರು ಅವನನ್ನು ಹಿಂದಿನಿಂದ ಹೊಡೆದು ಕೆಳಕ್ಕೆ ಕೆಡವಿದನು.

ಯಾವ ಸಂದರ್ಭದಲ್ಲಿ ಯುದ್ಧವು ನ್ಯಾಯ ಯುದ್ಧವಾದುದೆಂಬುದನ್ನು ಪೋಪ್‌ರವರು ತಿಳಿಸುತ್ತಾ ನ್ಯಾಯವಾದ ರೀತಿಯಿಂದ ಆತ್ಮರಕ್ಷಣೆ ಮಾಡಿಕೊಳ್ಳಬೇಕಾದ ಕಾಲದಲ್ಲಿ ಯುದ್ಧವು ಅಗತ್ಯ. ಹೀಗೆಂದರೆ ಒಂದು ದೇಶವು ಅನ್ಯಾಯವಾಗಿ ಪರರಿಂದ ಆಕ್ರಮಿಸಲ್ಪಟ್ಟಿರಬೇಕೆಂದು ಅರ್ಥ. ಈ ನಿರಾಕ್ರಮಣಕಾರ್ಯವು ನ್ಯಾಯರೀತಿ ನಿವಾರಣೆಯಾಗದೆ ಪ್ರಾಣಾಪಾಯವಾಗುವುದಕ್ಕೆ ಬಂದರೆ ಆಗ ಯುದ್ಧವು ಅಗತ್ಯ ಎಂದನು.

ವೃತ್ತಾಂತಗಳು.

ಅಬ್ಸೀನಿಯಾದ ಮೇಲೆ ಯುದ್ಧ ಮಾಡುವುದಕ್ಕೆ ತೊಡಗಿ ಅನುಭವಿಸಿದ ಅಪಮಾನಗಳನ್ನೆಲ್ಲಾ ತಳ್ಳಿ ಇಟಲಿಯ ಸರ್ವಾಧಿಕಾರಿಯಾದ ಮುಸೊಲಿನಿಯು ಒಪ್ಪಂದ ಮಾಡಿಕೊಳ್ಳುವುದಕ್ಕಾಗಿ ಲೀಗ್ ಸಭೆಗೆ ಪ್ರಾರ್ಥನೆ ಮಾಡುವುದು ಸಿದ್ಧವಾದ ಮಾರ್ಗ ಎಂದು ಫ್ರೆಂಚ್ ರಾಜಕೀಯ ಪಟುಗಳು ಹೇಳಿದ್ದಾರೆ. ಈಗ ಇಟಲಿಯಲ್ಲಿ ಸರ್ಕಾರದವರ ಮೇಲೆ ಉಂಟಾಗಿರುವ ಜನರ ಅತೃಪ್ತಿಯೇ ಮುಸಲಿನಿ ಹಿಮ್ಮೆಟ್ಟಲು ಕಾರಣ.

ಅಮೇರಿಕಾ ದೇಶದಲ್ಲಿ ಅಜ್ಜಿಯೊಬ್ಬಳು ತನ್ನ ಮೊಮ್ಮಗನು ವಿಮಾನದಲ್ಲಿ ಕುಳಿತು ಹಾರುವುದನ್ನು ನೋಡಬೇಕೆಂದು ಬಯಸಿದಳು. ಅವನಿಗೆ ಹದಿನೇಳು ವರುಷ. ಅವನು ಹೇಗೋ ಅಪ್ಪಣೆಯನ್ನು ಪಡೆದು ವಿಮಾನದಲ್ಲಿ ಸಾರಿದನು. ಅಜ್ಜಿಗೆ ಕಾಣಿಸಬೇಕೆಂದು 30 ಅಡಿಗಳ ಎತ್ತರದಲ್ಲೇ ಹಾರಿದನು. ಆದಕ್ಕಾಗಿ ಅವನಿಗೆ 3 ಪೌಂ ಜುರ್ಮಾನೆ ವಿಧಿಸಿದರು. ಅಜ್ಜಿಯು ಸಂತೋಷದಿಂದ ಕೊಟ್ಟಳು.

* * *

ಭರತಖಂಡದಲ್ಲಿ ಮಹಿಳೆಯರು ಸಾಂಘಿಕವಿದ್ಯಾ ವಿಷಯಗಳಲ್ಲಿ ಹಿಂದುಳಿದವರಾಗಿ ಕಂಡುಬಂದರೂ ಸಹ ಅವರ ಸ್ವಭಾವಕ್ಕೂ ದೇಶದ ಹಿತಕ್ಕೂ ಗಂಡಸರನ್ನೂ ಹೆಂಗಸರನ್ನೂ ಕಲೆಸಿ ವ್ಯಾಸಂಗ ಮಾಡಿಸುವುದು ಎಷ್ಟು ಮಾತ್ರವೂ ಒಳ್ಳೆಯದಲ್ಲ. ಹಿಂದೆಲ್ಲಾ ಮಹಿಳೆಯರೇ ಪ್ರತ್ಯೇಕವಾಗಿದ್ದಾಗ ಅವರ ಯೋಗ್ಯತೆಗೆ ಏನೂ ಭಂಗ ಬರಲಿಲ್ಲ. ಈಗಲೂ ಕೂಡಾ ಭರತಖಂಡದ ಸ್ತ್ರೀಯರ ಮಹಿಮೆಯನ್ನು ಕಾಪಾಡಬೇಕಾದರೆ ಮಹಿಳೆಯರಿಗೆ ಪ್ರತ್ಯೇಕ ಪದ್ಧತಿಯನ್ನೇ ಮಾಡುವುದು ಉತ್ತಮವೆಂದು ಶ್ರೀ॥ ವಿ. ಎಸ್. ಸಿಕೇರಿಯಾದವರು ಒರೆದಿರುವರು.

ಅಬ್ಸೀನಿಯಾದ ಯುದ್ಧದಲ್ಲಿ ಇಟಲಿಯ ವಿಮಾನ ದಳವು ಶುದ್ಧ ಅಪ್ರಯೋಜಕವಾಯಿತು.

ಈ ಸಾವಿರ ಟನ್ನುಗಳ ಅಕ್ಕಿಯು ಸಯಾಂ ದೇಶದಿಂದ ಬೊಂಬಾಯಿಗೆ ತರಿಸಿರುವರು. ಬರ್ಮಾ ದೇಶದಲ್ಲಿ ಅಕ್ಕಿಯು ಮುಗಿದು ಹೋಗಿದ್ದುದಕ್ಕಾಗಿ ಪರದೇಶದಿಂದ ತರಿಸಲಾಯಿತು.

ವಿವಿಧ ವಿಷಯಗಳು

ಸಯಾಂ ದೇಶದ ಸರ್ಕಾರದವರು ಅಲ್ಲಿನ ಎಲ್ಲ ಸರ್ಕಾರಿ ಸಿವಿಲ್ ಅಧಿಕಾರಿಗಳೂ ಆ ದೇಶೀಯ ಉಡುಪಿಗೆ ಒದಲಾಗಿ ಪರಾಯಿಗಳನ್ನೇ ಧರಿಸಬೇಕೆಂದೂ ಆದರೆ ಕೋರ್ಟುಗಳಲ್ಲಿ ನ್ಯಾಯಾಧಿಪತಿಗಳು ಮಾತ್ರ ದೇಶೀಯ ಉಡುಪನ್ನು ಧರಿಸಬಹುದೆಂದೂ ಉಳಿದ ಕಾಲದಲ್ಲಿ ಪರಾಯಿಗಳನ್ನೇ ಧರಿಸಬೇಕೆಂದೂ ಆಜ್ಞೆ ಮಾಡಿದ್ದಾರೆ.

ಫೆರೋಜ್‌ಪುರದಲ್ಲಿ ಇಬ್ಬರು ಬ್ರಿಟಿಷ್ ಸೈನಿಕರು ಅಲ್ಲಿ ಸಂಚಾರಕ್ಕೆ ಹೋಗಿದ್ದ ಬ್ಲೇವರ್ ಎಂಬುವರನ್ನೂ ಅವರ ಪತ್ನಿಯವರನ್ನೂ ದುರುದ್ದೇಶದ ನಿಮಿತ್ತ ಹಿಂಸೆಪಡಿಸಿ ಓಡಿಹೋದರೆಂದು ವರದಿಯಾಗಿದೆ.

ಖುಲಾನಾದ ಮುನಿಸಿಪಲ್ ಕಮಿಷನರ್ ಆಗಿದ್ದ ಮೌಲ್ವಿ ರಹತ್ ಮೊರ್ ರವರು ಕೆಲವು ದಿನಗಳ ಕೆಳಗೆ ಒಂದು ರಾತ್ರಿ ಸಂಚಾರಕ್ಕೆ ಹೊರಟವರು ಇನ್ನು ಪತ್ತೆ ಇಲ್ಲದೆ ಇದ್ದಾರೆ. ಈ ವಿಷಯವಾಗಿ ಅಲ್ಲಿ ಬಹಳ ಕಳವಳಕ್ಕೀಡಾಗಿ ಅನೇಕ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಕಲ್ಕತ್ತಾ ವಿಶ್ವವಿದ್ಯಾಲಯದ 1936ನೇ ವರುಷದ ಪರೀಕ್ಷೆಯೊಂದಕ್ಕೆ ಒಂದು ಪುಸ್ತಕವನ್ನು ನಿಯಮಿಸಿದರು. ಆದರೆ ಅಲ್ಲಿನ ಮುಸಲ್ಮಾನ್ ಸದಸ್ಯರು ಆ ಪುಸ್ತಕದಲ್ಲಿ ರಜಪೂತ ವೀರಚರಿತ್ರೆಯು ಮಾತ್ರ ವರ್ಣಿತವಾಗಿದೆಯೆಂದು ಅಸಮಾಧಾನ ವ್ಯಕ್ತಪಡಿಸಿದ್ದರ ಮೇಲೆ ಮುಸಲ್ಮಾನರ ಚರಿತ್ರೆಯನ್ನೂ ಅದರಲ್ಲಿ ಸೇರಿಸಬೇಕೆಂದು ಬೇರೆ ಪುಸ್ತಕವನ್ನು ಪ್ರಕಟಿಸುವ ಏರ್ಪಾಡುಗಳು ನಡೆಯುತ್ತಿವೆ.

ಜರ್ಮನಿ ದೇಶದಲ್ಲಿ ಯುದ್ಧದ ವಿಷಯವಾಗಿ ಅನೇಕ ವಿದ್ವಾಂಸರು ವಿಚಿತ್ರತರವಾದ ಅಭಿಪ್ರಾಯವನ್ನು ಪ್ರಕಟಿಸುತ್ತಿರುವರು. ಮಾನವ ಜನಾಂಗದ ನಾಗರೀಕತೆಗೆ ಯುದ್ಧವೇ ಹೆಗ್ಗುರುತು. ಯುದ್ಧವು ಜನಾಂಗದ ಅಭಿವೃದ್ಧಿ ಸ್ವಭಾವದ ಮಾರ್ಗ. ಎಲ್ಲಾ ವಿಷಯಗಳಿಗೂ ಮೂಲ. ಜನಾಂಗವನ್ನು ಒಂದು ರೀತಿಯಲ್ಲಿ ನಾಶಮಾಡುವಂತೆಯೇ ಇನ್ನೊಂದು ರೀತಿಯಲ್ಲಿ ಹೊಸ ಜೀವನವನ್ನು ಪ್ರಾರಂಭಿಸಿಯೂ ಬಿಡುತ್ತದೆ. ಎಂದು ಪ್ರಕಟಿಸುತ್ತಿರುವರು.

ಗುಲಿಸ್ತಾನ್

(ಕಾಪಿರೈಟ್)

ರಾ ಜ ನೀ ತಿ

(೧೩)

ತನ್ನ ಆಮೋದ-ವಿನೋದಗಳಿಗಾಗಿ ಇರ.ಳನ್ನೇ ಹಗಲಾಗಿ ಮಾಡ.ತ್ತಿದ್ದ, ಸುರಾಪಾನೋನ್ಮತ್ತತೆಯ ವೈಭವದಲ್ಲಿರ ವಾಗ, "ನನ್ನ ಇಷ್ಟು ಜೀವಿತ ಕಾಲದೊಳಗೆ ಎಂದೂ ಇಂದಿನಷ್ಟು ಸುಖಸಂತೋಷಗಳಿರಲಿಲ್ಲ. ಏಕೆಂದರೆ, ಈಗ ನನಗೆ ಉಜ್ಜೆ-ನೀಚವೆಂಬ ಕಾರಕವ್ಯದ ಯೋಚನೆ ಇಲ್ಲ. ಯಾರೊಬ್ಬನನ್ನೂ ಲಕ್ಷಿಸುವುದಿಲ್ಲ ಎಂದು ಕೂಗಿಕೊಳ್ಳುತ್ತಿದ್ದ, ಒಬ್ಬ ರಾಜನ ವಿಷಯವನ್ನು ಕೇಳಿರ ವೆನು. ಈ ಮಾತು ಹೊಗೆ ವಸ್ತ್ರಹೀನನಾದ, ಚಳಿಯಿಂದ ನಡುಗುತ್ತಿದ್ದ ಒಬ್ಬ ಫಕೀರನಿಗೆ ಕೇಳಲು ಅವನು ದೊರೆಯನ್ನು ಕುರಿತು "ಪ್ರಪಂಚದಲ್ಲಿ ನಾನಿನಾನಂತಾದ ಭಗ್ಯವಂತರಾರೂ ಇಲ್ಲದಿರ.ವ ನಿನಗೆ ನಿನ್ನ ವಿಷಯದಲ್ಲಿ ಯಾವ ಯೋಚನೆಯು ಇರಲು ಕಾರಣವಿಲ್ಲವೆಂಬುದನ್ನು ನಾನು ಒಪ್ಪುವೆನು : ಆದರೆ ನಮ್ಮಂತಹ ಜನರ ಯೋಗ್ಷೇಮವನ್ನು ವಿಚಾರಿಸಿಕೊಳ್ಳುವುದು ನಿನ್ನ ಕರ್ತವ್ಯವಲ್ಲವೆ ? ಎಂದು ಉತ್ತರವಿತ್ತನು. ಇದನ್ನು ಕೇಳಿ ದೊರೆಯು ಸಂತುಷ್ಟನಾಗಿ, ಸಾವಿರ ನಾಣ್ಯಗಳ ಗಂಟನ್ನು ತೆಗೆದುಕೊಂಡು ಕಿಟಿಕಿಯ ಹೊಂಭಾಗದಲ್ಲಿದ್ದ ಫಕೀರನನ್ನು ಕರಿತು, "ಹಿಡಿ ನಿನ್ನ ಸೆರಗೊಡ್ಡು" ಎಂದು ಹೇಳಿದನು. "ಬಟ್ಟೆಯೇ ಇಲ್ಲದ ನನಗೆ ಸೆರಗೆಲ್ಲಿರುವುದು ?" ಎಂದು ಆ ಫಕೀರನು ಹೇಳಿದನು ದೊರೆಯು ಅವನ ದುಸ್ಥಿತಿಗೆ ಇನ್ನೂ ಕನಿಕರಪಟ್ಟು, ದ್ರವ್ಯದೊಂದಿಗೆ ಗೌರವಾದರ ಉಡುಗೆತೊಡುಗೆಗಳನ್ನು ಕೊಟ್ಟು ಕಳುಹಿಸಿದನು.

ಫಕೀರನು ಕೆಲವು ದಿವಸಗಳಲ್ಲಿಯೇ ಹಣವನ್ನೆಲ್ಲಾ ದ.ಂದುವೆಚ್ಚವಾಡಿ ಮತ್ತೆ ಹೀನಸ್ಥಿತಿಗಿಳಿದು, ದೊರೆಯಲ್ಲಿಗೆ ಪುನಃ ಬ ದನು "ಸ್ವತಂತ್ರ ಮತಾಚಾರಿಗಳ ಕೈಲಿ ದ್ರವ್ಯವು ನಿಲ್ಲುವುದಿಲ್ಲ ಕಾಮುಕನ ಹೃದಯದಲ್ಲಿ ತಾಳ್ಮೆಗೆ ಜಾಗವಿರುವುದಿಲ್ಲ; ಜರಡಿಯಲ್ಲಿ ನೀರು ನಿಲ್ಲುವುದಿಲ್ಲ" -ಈ ಫಕೀರನ ವಿಷಯದಲ್ಲಿ ದೊರೆಗೆ ಯೋಚನೆಯೇ ಇಲ್ಲವೆಂದಾಗ, ಈತನ ವಿಚಾರವನ್ನು ತಿಳಿಸಲು ಕೂಡ ಪ್ರೋದ್ದೀಪಿತನಾಗಿ ವಿಮುಖನಾದನು. ರಾಜಕೀಯ ಮಹದ್ವಿಚಾರಗಳನ್ನು ಯೋಚಿಸುತ್ತಿರುವಾಗ ರಾಜನು, ಕ್ಷುಲ್ಲಕ ಕೇವಲವಾದ ವಿಷಯಗಳಿಗೆ ಗಮನಕೊಡಲಾರನಾದುದರಿಂದ, ಅಂತಹ ಸಂದರ್ಭಗಳಲ್ಲಿ ರಾಜನ ಕೋಪತಾಪಗಳಿಗೆ ಎದ ರಾಗದೆ ಸರಿಯಾಗಿ ವರ್ತಿಸಬೇಕೆಂದು ವಿವೇಕಿಗಳೂ, ಅನುಭವಶಾಲಿಗಳೂ ಹೇಳುತ್ತಾರೆ.

ಸಮಯವನ್ನು ಕಾಯುದವನ ವೇಲೆ ರಾಜನ ಕಟಾಕ್ಷವು ಬೀಳಲಾರದು. ಒಂದು ಅಭಿಪ್ರಾಯವನ್ನು ಸೂಚಿಸಲು ಸುಸಮಯವೊದಗುವುದಕ್ಕೆ ಮುಂಚೆ ಅಪ್ರಯೋಜಕ ಅಪಲಾಪಗಳಿಂದ ಪರಿಣಾಮವನ್ನು ಕೆಡಿಸಿಕೊಳ್ಳಬಾರದು —ರಾಜನು ಅವನ ವಿಷಯವನ್ನು ಕೇಳಿ "ಅಷ್ಟೊಂದು ದ್ರವ್ಯವನ್ನು ಅಲ್ಪಕಾಲದಲ್ಲಿಯೇ ದುಂದಾಗಿ ವ್ಯಯಮಾಡಿದ ಉದ್ಧತ ಅಪವ್ಯಯಿ ಯಾದ ಆ ಫಕೀರನನ್ನು" ಹೊಡೆದೋಡಿಸಿ ; ಏಕೆಂದರೆ, ಧರ್ಮ-ಕೆಂದಿರ.ವ ಪ್ರಜಾನೆಯು ಬಡಬಗ್ಗರಿಗೆ ಒಂದು ತುತ್ತು ಸಹಾಯ.ಮಾಡಲಿರುವುದೇ ಹೊರತು ಪಿಶಾಚ ಸ್ವರೂಪಿಗಳ ಹೊಟ್ಟೆಯನ್ನು ತುಂಬಲು ಉಪಯೋಗಿಸುವದಕ್ಕಲ್ಲ" ಎಂದನು. ಹಗಲು ಸುಗಂಧಿತ ಮೇಣದ ಬತ್ತಿಯನ್ನುರಿಸುವ ಮೂರ್ಖನು ಇರುಳು ದೀಪಕ್ಕೆ ಎಣ್ಣೆಯಿಲ್ಲದ ಸ್ಥಿತಿಯನ್ನು ಶೀಘ್ರದಲ್ಲಿ ಕಾಣಲೇ ಬೇಕಾಗುವುದು.

ಅಲ್ಲಿದ್ದ ವಿವೇಚನಾಪರನಾದ ಮಂತ್ರಿಗಳಲ್ಲಿ ಒಬ್ಬನು "ಎಲೈ ಪ್ರಭುವೇ, ಇಂತಹವರು ಜೀವನಕ್ಕೆ ಆವಶ್ಯಕವಾದುದನ್ನು ಕೂಡ ಹಾಳುಮಾಡಿಕೊಳ್ಳದಿರುವಂತೆ ಅವರಿಗೆ ಜೀವನಕ್ಕೆ ಬೇಕಾದ.ದನ್ನು ಸ್ವಲ್ಪ ಸ್ವಲ್ಪವಾಗಿ ಒದಗಿಸುವುದು ಯುಕ್ತವಾಗಿದೆ ; ಆವರೆ ಈಗ ನೀವು ಅಪ್ಪಣೆಕೊಟ್ಟಿರುವಂತೆ ಶಿಕ್ಷಿಸ.ವುದೂ, ಪ್ರತಿಬಂಧಿಸ.ವುದೂ ಸರಿಯಾದ ವಿಷಯವೇ ಆದಾಗ್ಯೂ, ಇದನ್ನು ರಾಜನ ಕಾರ್ಪಣ್ಯವೆಂದು ಕೆಲವರು ಆರೋಪಣೆ ಮಾಡಬಹುದು. ಒಬ್ಬನಿಗೆ ಸಹಾಯವನ್ನು ಪಡೆಯಬಹುದಾದ ಆಶೆಯನ್ನು ಹುಟ್ಟಿಸಿ, ಅನಂತರ ಹೃದಯ ಭೇದಕವಾದ ಅಪನಂಬಿಕೆಯ ಆರೋಪವನ್ನು ಹೊರಿಸುವುದು ಉದಾರಿಗಳ ಸ್ವಭಾವಕ್ಕೆ ಅನುಸರಣೀಯವಾದ ದಲ್ಲ. ನೀನಾಗಿಯೇ ಆಶಾದ್ವಾರವನ್ನು ತೆರೆಯಬಾರದು. ಒಂದುವೇಳೆ ಹಾಗೆ ಮಾಡಿದ ಪಕ್ಷದಲ್ಲಿ ಕಠಿಣ ನಿರ್ಮಮತೆಯಿಂದ ಅದನ್ನು ಮುಚ್ಚಲೂ ಕೂಡದು. ಯಾತಾರ್ಥಿಗಳು ಉಪ್ಪು ನೀರಿನ ಸಮುದ್ರದ ಹತ್ತಿರ ಗುಂಪುಗೂಡುವುದಿಲ್ಲ. ಅದರೆ ಸ್ವಚ್ಛವಾದ ನೀರಿನ ಚಿಲುಮೆಯನ್ನು ಕಂಡರೆ ಅಲ್ಲಿ ಮನುಷ್ಯರೂ, ಪಕ್ಷಿಗಳೂ, ಹರಿದಾಡುವ ಪ್ರಾಣಿಗಳೂ ಕೂಡ ಸೇರುವುವು.

[ಮುಂದುವರಿಯುವುದು.

ವೇದಾಂತ ವಿಷಯದಲ್ಲಿ ಅದ್ವಿತೀಯಪಂಡಿತರೂ, ಪ್ರಕೃತ ಆಂಧ್ರ ವಿಶ್ವವಿದ್ಯಾಲಯದ ವೈಸ್‌ಚಾನ್ಸಲರೂ ಆಗಿರುವ ಡಾ॥ ಸರ್ ರಾಧಾಕೃಷ್ಣನ್‌ರವರು ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರಾಗಿ ಹೋಗಿರವರೆಂದು ವದಂತಿ ಇದೆ. ಡಾ॥ ರಾಧಾಕೃಷ್ಣರವರು ಪ್ರೊಫೆಸರ್ ಆಫ್ ಕಂಪೇರಟಿವ್ ರಿಲಿಜನ್ಸ್ ಆಗಿ ಕೆಲಸನಾಡುವರು.

ಆರೋಗ್ಯವೇ ಅತಿ ಮುಖ್ಯವಾಗದ್ದು

ಡಾ॥ ತಿರುಮೂರ್ತಿ ಯವರು ವಿಶಾಖಪಟ್ಟಣದಲ್ಲಿ ಪಟ್ಟಭದ್ರರಿಗೆ ಪಟ್ಟಗಳನ್ನು ಕೊಡುವ ಸಮಯದಲ್ಲಿ ಹೀಗೆ ಉಪನ್ಯಾಸ ಮಾಡಿದರು ಇದರಲ್ಲಿ ಎಲ್ಲರೂ ತಿಳಿಯಬೇಕಾದ ಅಂಶಗಳು ಹಲವು ಇರುತ್ತವೆ—

ಆರೋಗ್ಯವು ಯಾವ ಜಾತಿಯವರಿಗಾದರೂ ಅಗತ್ಯವಾದದ್ದು ಇದನ್ನು ನಮ್ಮ ಪೂರ್ವಿಕರು ಸರಿಯಾದ ನಿಯಮ.ಗಳಿಂದಿಗೆ ಕಾಪಾಡಿಕೊಳ್ಳುತ್ತ ಬಂದರು ಆದ.ದರಿಂದ ಅವರು ಧೃಡಕಾಯರಾಗಿಯೂ ಮನೋಬಲವುಳ್ಳವರಾಗಿಯೂ ಇದ್ದರು. ಬರ ಬರುತ್ತಾ ನಾವು ಪರಂಪರೆಯಾಗಿ ಬಂದಿರುವ ಆಚಾರಗಳನ್ನೂ ನಿರಾಕರಿಸಿ ವ್ಯಾಧಿಗಳ ಪಾಲಾಗಿ ಕೊನೆಗೆ ಯಾವದಕ್ಕೂ ಕೆಲಸಕ್ಕೆ ಬಾರದಂಥವರಾಗಿ ೩೫ ವರ್ಷ ವಯಸ್ಸಿಗೆ ಮುದುಕರಾಗುತ್ತಿರ.ವೆವು. ಪೂರ್ವದಲ್ಲಿ ೭೦ ವರ್ಷ ವಯಸ್ಸಿನವರೂ ಪೂರ್ಣಾರೋಗ್ಯದೊಡನೆ ಸ.ಖವಾಗಿರುತ್ತಿದ್ದರು. ಧನವಂತರು ಅಮಿತವಾಗಿ ನಿಯಮವಿಲ್ಲದೆ ಆಹಾರವನ್ನು ಭಜಿಸುವದರಿಂದಲೂ, ದರಿದ್ರರು ಸಾಕಾದಷ್ಟು ಆಹಾರವಿಲ್ಲದ ಕಾರಣದಿಂದಲೂ ಶರೀರ ಸೌಕರ್ಯವಿಲ್ಲದೆ ಕೃಶಿಸಿ ಹೋಗುತ್ತಿರುವರು. ಹೆಚ್ಚು ಅನುಭವಸ್ಥರು ಹೇಳುವಂತೆ ನಮ್ಮ ಆರ್ಥಿಕ ಸ್ಥಿತಿಯು ಸರಿಹೋದಲ್ಲಿ ಶೇಕಡಾ ೭೫ ರಷ್ಟು ವ್ಯಾಧಿಗಳು ತಗ್ಗಬಹುದು. ಆರ್ಥಿಕ ಸ್ಥಿತಿಯು ಸರಿಹೋಗುವದು ಹೇಗೆ ? ಎಲ್ಲರಿಗೂ ಪಲ್ಲಕ್ಕಿಯನ್ನು ಏರಬೇಕೆಂಬ ಇಷ್ಟವಿರುವದಾದರೂ ಅಲ್ಲಿ ಯಾವ ವಿಶೇಷವೂ ಇಲ್ಲವೆಂಬ.ದನ್ನರಿಯುವದಿಲ್ಲ. ಯ ದೃಚ್ಛಲಾಭ ಸಂತೃಪ್ತಿಯಿಲ್ಲದೆ ನೂತನ ಮಾರ್ಗಗಳನ್ನು ಕಲ್ಪಿಸಿಕೊಂಡು ಧನವನ್ನು ಹೇಗೋ ಅರ್ಜಿಸಿ ನಿರರ್ಥಕಗಳಾದ ವೇಷಗಳನ್ನು ಹಾಕಿಕೊಂಡು ಮುಖ್ಯವಾದ ಪರಮಾರ್ಥವನ್ನೇ ಮರೆಯುತ್ತಿರುವರು ತನ್ನ ಧಾರಿ ತನ್ನದಾಗಲಿ, ತನ್ನ ನೆರೆಹೊರೆಯವರ ಮಾತೇ ಅವಶ್ಯಕವಿಲ್ಲ ಎಲ್ಲಾ ಸ್ವಾರ್ಥ. ಒಳ್ಳೇ ಕಾರ್ಯವನ್ನು ಮಾಡಲೆಳಿಸಿದರೂ ಅದರಲ್ಲಿಯೂ ತನಿಗೇನಾದರೂ ಲಾಭವಿರುವದೇ ಎಂಬ ಯೋಚನೆ. ನಮ್ಮ ಶಾಸ್ತ್ರನಿಕ ವರ್ಗಗಳು ಕೂಡ ಪ್ರಜೆಗಳ ಶ್ರೇಯಸ್ಸನ್ನೇ ಪೂರ್ತಿಯಾಗಿ ಬಯಿಸದೆ ತಮಗೆ ಮನಬಂದಂತೆ ನಡೆಯುತ್ತಿರುವರು. ಇದರಿಂದ ನಮಗೆ ಅವಶ್ಯಕವಾದ ಬದಲಾವಣೆಗಳು ಆಗುತ್ತಿಲ್ಲ.

ಜಪಾನು ಪ್ರಪಂಚದಲ್ಲಿ ಅತಿ ದೊಡ್ಡದಾದ ಬಿಸ್ಕಗಾರ ಜನತಾಂಗವಾಗಿರುತ್ತದೆ. ಬಿಸ್ಕಗಾರಿಕೆಯಿಂದ ಇವರ. ಉತ್ಪತ್ತಿಯು ಸಾಧಾರಣವಾಗಿ ೪೦೦,೦೦೦,೦೦೦ ರೂಪಾಯಿ ಯಾಗಿರುತ್ತದೆ.

ಜೀವಶಾಸ್ತ್ರದ ತತ್ವಸಾರ

ಮತ್ತು

ಸತ್ತವರ ಲೋಕ

(ಲೇಖಕರು—"ಕ." ಯವರು)

[ಸಕಲ ಹಕ್ಕುಗಳನ್ನು ಲೇಖಕರು ಕಾಯ್ದಿರಿಸಿಕೊಂಡಿದ್ದಾರೆ]

ಸತ್ತವನು ಜಡದೇಹದಿಂದ ಬೇರ್ಪಡಿಸಲ್ಪಟ್ಟ ಸೂಕ್ಷ್ಮದೇಹದಿಂದೊಡಗೂಡಿದವನಾಗಿರುವನೆಂಬ ವಿಷಯವನ್ನು ಬಂಧುಪ್ರೇಮದಿಂದ, ಪುನಃ ಪುನಃ ತನಗೋಸ್ಕರವಾಗಿ ಮರುಗುತ್ತಿರುವವರನ್ನು ಸಮಾಧಾನಪಡಿಸಲು ಯತ್ನಿಸುವನು. ಸತ್ತ ದಿನವೋ ಅಥವಾ ಮಾರನೇದಿನವೋ ಕೆಲವು ಪದಾರ್ಥಗಳನ್ನು ಅಲುಗಾಡಿಸುವುದರಿಂದ ಅಂದರೆ ಬಾಗಿಲು ಕಿಟಕಿಗಳನ್ನು ಶಬ್ದಮಾಡುವನು. ಆಗ ಈ ಶಾಸ್ತ್ರತತ್ವಗಳನ್ನರಿಯದ ಬಂಧುಗಳು ದೆವ್ವವೋ ಪಿಶಾಚವೋ ಬಂದಿತೆಂದು ಹೆದರಿ ಮಾಂತ್ರಿಕರನ್ನು ಕರೆಯಿಸಿ, ಸತ್ತವನಿಗೆ ಹಿಂಸದಾಯಕವಾದ ಕಾರ್ಯಗಳನ್ನು ಮಾಡಿಸಿ ತೊಂದರೆ ಕೊಡುವರು. ಆಗ ಸತ್ತವನು ಬೇಸರಪಟ್ಟು ತನ್ನ ಸ್ಥಾನಕ್ಕೆ ಹೊರಟು ಹೋಗುವನು. ವಾಚಕರೇ! ಮನುಷ್ಯರ ಪ್ರವರ್ತನೆಯು ಎಷ್ಟು ವಿಚಿತ್ರವಾಗಿರುವುದೆಂಬುದನ್ನು ನೋಡಿದಿರಾ ಯಾವ ಬಂಧುವಿಗೋಸ್ಕರ, ಸಾಯುವುದಕ್ಕೆ ಐದು ನಿಮಿಷಗಳ ಮುಂಚೆ ಸರ್ವಸ್ವವನ್ನೂ ಧಾರೆಯೆರೆಯಲು ಸಿದ್ಧರಾಗಿರುವರೋ ಯಾವನಿಂದ ಒಂದೆರಡು ಕೊನೆಯ ಮಾತುಗಳನ್ನು ಕೇಳಲು ಕಾತುರರಾಗಿರುವರೋ ಅಂಥವರೇ, ಆ ಬಂಧುವು ಸತ್ತ ಐದು ನಿಮಿಷಗಳಲ್ಲಿ ಅವನು ಭೂತವೋ, ಪಿಶಾಚವೋ ಆಗಿರುವನೆಂದು ಅವನೊಡನೆ ಯಾವ ವ್ಯವಹಾರವೂ ಸಾಧ್ಯವಿಲ್ಲವೆಂದೂ ಹೆದರಿ ಅವನು ಪುನಃ ಸಂಭಾಷಿಸಲು ಕಾತುರನಾಗಿ ಬಂದರೆ ಅವನನ್ನು ದೆವ್ವವೆಂದು ಹೊಡಚೋಡಿಸಲು ಪ್ರಯತ್ನಿಸುವರು. ಮನುಷ್ಯನ ಪ್ರೀತಿಯು ಎಷ್ಟು ಲಘುವಾದುದು! ಎಷ್ಟು ಕ್ಷಣಿಕವಾದುದು! ಈಗ ಒಬ್ಬನ ಪ್ರೀಯ ತಾಯಿಯು ಸತ್ತಿರುವಳೆಂದು ತಿಳಿಯೋಣ. ಆಗ ಆ ತಾಯಿಯು ವ್ಯಸನಪಡುತ್ತಿರುವ ಮಗನನ್ನು ಸಮಾಧಾನಪಡಿಸಲು ಪ್ರಯತ್ನಪಟ್ಟಾಗ ಆಕೆಯ ಪ್ರಯತ್ನಗಳೆಲ್ಲವೂ ವಿಫಲವಾಗಿ ತನ್ನ ಮಗನೇ ತನ್ನನ್ನು ದೆವ್ವವೆಂದು ತಿಳಿದು ಹೆದರುತ್ತಿರುವುದನ್ನು ನೋಡಿದರೆ ಎಷ್ಟು ಬೇಸರವಾಗಬಹುದು ವಾಚಕರೇ, ಊಹಿಸಬೇಕು. ಹೀಗೆ ಎಷ್ಟೋಬಾರಿ ಸತ್ತಿರುವವರು ತಮ್ಮ ಮನಸ್ಸಿನ ಬೇಸರಿಕೆಯನ್ನೂ ದುಃಖವನ್ನೂ ಜೀವಶಾಸ್ತ್ರದ ಮುಖಾಂತರವಾಗಿ ತಿಳಿಸಿರುತ್ತಾರೆ. ನಾವುಗಳು ಇದುವರೆವಿಗೂ ನಮ್ಮ ನಮ್ಮ ಸುಖ ದುಃಖಗಳ ಕಡೆಗೆ ಗಮನಕೊಟ್ಟು ಸ್ವಾರ್ಥಪರರಾಗಿರುವೆವು. ಸತ್ತವರ ಕಷ್ಟಗಳನ್ನು ಅವರಿಗೆ ಉಂಟಾಗುವ ಅಪಾರ ದುಃಖವನ್ನು ಗಣನೆಗೆ ತಾರದೆ ಇರುತ್ತೇವೆ.

ಈ ರೀತಿಯಲ್ಲಿ ತನ್ನ ಪ್ರಯತ್ನಗಳೆಲ್ಲವೂ ವಿಫಲವಾಗುವುದನ್ನು ನೋಡಿ ಸತ್ತವನು ಕೇವಲ ನಿರಾಶೆಯುಳ್ಳವನಾಗುತ್ತಾನೆ. ಅವನಿಗಿಂತೆ ಮುಂಜೆ ಸತ್ತಿರಬಹುದಾದ ಅವನ ಒಂದುಗಳು ತಮ್ಮ ಸೂಕ್ಷ್ಮಶರೀರಗಳಲ್ಲಿ ಬಂದು ಅವನನ್ನು ತಮ್ಮ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ. ಆಹಾ! ಆ ಲೋಕಗಳ ವರ್ಣನೆಗಳನ್ನು ಅಲ್ಲಿ ಸತ್ತವರು ಇರುವ ಜೀವನ ಮತ್ತು ದಿನಾಚರಣೆ ಮುಂತಾದವುಗಳನ್ನು ಈ ಶಾಸ್ತ್ರದಿಂದ ನಾವು ತಿಳಿಯಬಹುದಾಗಿದೆ. ಇಂಥಹ ಲೋಕಗಳು ಆರಿವೆ ಎಂದು ಸತ್ತವರೆಲ್ಲರೂ ಹೇಳುತ್ತಾರೆ. ಈ ಆರು ಲೋಕಗಳನ್ನು ಪರಲೋಕಗಳೆಂದು ಕರಿಯೋಣ. ಇವು ಈ ಭೂಮಂಡಲವನ್ನು ಆವರಿಸಿ, ಒಂದರ ಮೇಲ್ಲೊಂದು ಜೋಡಿಸಿದಂತಿವೆ. ಸತ್ತವರ ಪೈಕಿ ಆವರವರ ಗುಣಗಳು ಮತ್ತು ಸತ್ಕಾರ್ಯಗಳಿಗೆ ಅನುಸಾರವಾಗಿ ಆಯಾಯ ಲೋಕಗಳನ್ನು ಸೇರುತ್ತಾರೆ. ಸತ್ಪುರುಷರು ಮತ್ತು ಸಾಧುಗಳು ಆರನೇ ಲೋಕವನ್ನು ಸೇರುವರು. ಈ ಆರನೇ ಲೋಕವು ಭೂಮಿಗೆ ಅತ್ಯಂತ ದೂರದಲ್ಲಿರುವುದು. ದುಷ್ಟರು, ಕ್ರೂರಕರ್ಮಗಳನ್ನು ಮಾಡಿರುವವರು ಮತ್ತು ಪಾಪಿಗಳು ಭೂಮಿಯನ್ನು ಬಿಟ್ಟುಹೋಗಲೆ ಹತ್ತಿರದಲ್ಲಿಯೇ ಇರುತ್ತಾರೆ. ಈ ಲೋಕಗಳಲ್ಲಿ, ನಮ್ಮ ಭೂಮಿಯಲ್ಲಿರುವಂತೆಯೇ ಎಲ್ಲ ಪ್ರಾಕೃತ ಪದಾರ್ಥಗಳೂ ಇರುವುವು. ಈ ಲೋಕಗಳಿಗೆ ಭೂಮಿಯಲ್ಲಿ ಸತ್ತವರು ಪ್ರತಿದಿವಸವೂ ಬಂದು ಸೇರುತ್ತಿರುತ್ತಾರೆ. ಆದುದರಿಂದ ಪರಲೋಕಗಳಲ್ಲಿ ಜನನವೆಂಬುದಿಲ್ಲ ಮತ್ತು ಸಾಧಾರಣವಾಗಿ ಹತ್ತು, ಇಪ್ಪತ್ತು ವರುಷಗಳವರೆವಿಗೂ ಅವರವರ ಕರ್ಮಕ್ಕನುಸಾರವಾಗಿ ಪರಲೋಕದಲ್ಲಿಯೇ ಇರುತ್ತಾರೆ. ಆ ಮೇಲೆ ಪುನಃ ಜೀವರುಗಳು ಈ ಭೂಲೋಕದಲ್ಲಿ ಜನ್ಮ ವೆತ್ತುತ್ತಾರೆ. ಹಾಗೆ ಪುನರ್ಜನ್ಮ ಹೊಂದಿರುವವರನ್ನು ನಾವು ಈ ಜೀವಶಾಸ್ತ್ರದ ಮಾರ್ಗದಿಂದ ಗುರ್ತಿಸಬಹುದಾಗಿದೆ. ಒಂದೊಂದುಸಾರಿ, ಸತ್ತು ಒಂಭತ್ತು ವರುಷಗಳಾಗಿದ್ದರೂ ಇನ್ನೂ ಪರಲೋಕದಲ್ಲೇ ಇರುವವರೂ ಇದ್ದಾರೆ. ಹೀಗೆ ಜನನ, ಮರಣವೆಂಬ ಚಕ್ರದಲ್ಲಿ ಮನುಷ್ಯಕೋಟಿಯು ತಿರುಗುತ್ತಿದೆ. ನನಗೆ ಈ ಲೋಕದಲ್ಲಿ ಮತ್ತಾ ಉಂಟಾದರೆ, ಮರಣಹೊಂದಿದವನು ಪರಲೋಕವನ್ನು ಸೇರುವುದರಿಂದ ಆ ಲೋಕದಲ್ಲಿ ಜನನವಾದಂತೆಯೇ ಗಣಿಸಿಮಾಡಬಹುದು. ಇದಲ್ಲದೆ ಈಗ ಸುಮಾರು ನಲವತ್ತು ವಯಸ್ಸಿನವನು ಸಾಯುವನೆಂದು ಊಹಿಸೋಣ. ಅವನು ಪರಲೋಕದಲ್ಲಿಯೂ ನಲವತ್ತು ವರುಷದವನಂತೆ ವರ್ತಿಸುತ್ತಾನೆ ಏಕೆಂದರೆ, ಸೂಕ್ಷ್ಮದೇಹವು ಜಡದೇಹವನ್ನೇ ಅನುಸರಿಸಿ ಅದರ ಜೊತೆಯಲ್ಲಿಯೇ ಬೆಳೆಯುತ್ತದೆ ಬಂದು ಮಗುವು ಸತ್ತರೆ ಅದು ಪರಲೋಕದಲ್ಲಿಯೂ ಮಗುವಾಗಿದ್ದು ಅಲ್ಲಿ ಬೆಳವಣಿಗೆಯನ್ನು ಹೊಂದುತ್ತದೆ. ಅದಕ್ಕೆ ಪ್ರಾಯವೂ ಮುಪ್ಪೂ ಸಹ ಆ ಲೋಕದಲ್ಲಿ ಉಂಟಾಗುತ್ತದೆ. ಈ ವಿಚಾರದಲ್ಲಿ ಪ್ರಖ್ಯಾತ ಶಾಸ್ತ್ರಜ್ಞರು ಪರೀಕ್ಷಾರ್ಥವಾಗಿ ಅನೇಕ ಮಾರ್ಗಗಳನ್ನು ಅನುಸರಿಸಿ, ಆ ಪರಲೋಕಗಳ ವರ್ಣನೆಗಳನ್ನು ಸತ್ತವರ ಸ್ಥಿತಿಗತಿಗಳನ್ನು ವಿವರಿಸಿ ಅಮೂಲ್ಯವಾದ ಗ್ರಂಥಗಳನ್ನು ಬರೆದಿರುತ್ತಾರೆ. ಈ ಗ್ರಂಥಗಳಲ್ಲಿ ಸುಫಲದಾಯಿ' ಅಥವಾ "ಪರಣಾಂತರ ಜೀವನ" ಎಂಬ ಆಂಗ್ಲೇಯ ಭಾಷೆಯಲ್ಲಿ ರಚಿಸಿರುವ ಪುಸ್ತಕವೇ ಸಮಗ್ರ ಪ್ರಾಮುಖ್ಯವಾದದ್ದು. ಏತಕ್ಕೆಂದರೆ, ಇಡೀನ್ನು ಇಡೀ ಇಂಡಿಯಾದೇಶದಲ್ಲಿಯೇ ಈ ಶಾಸ್ತ್ರಶೋಧನೆಯಲ್ಲಿ ಅಗ್ರಗಣ್ಯರಾದ ವಿ. ಡಿ. ಋಷಿ ಎಂಬುವವರು ರಚಿಸಿರುತ್ತಾರೆ. ಇಂಡಿಯಾದೇಶದಲ್ಲೆಲ್ಲಾ ಈ ಶಾಸ್ತ್ರದ ವಿಚಾರವಾಗಿ ಪ್ರಕಟವಾಗಿರುವ ಪ್ರಥಮ ಗ್ರಂಥವು ಇದೇ ಆಗಿರುತ್ತದೆ. ಭಾವುಕರಾದ ವಾಚಕರು ಈ ಪುಸ್ತಕವನ್ನು ತರಿಸಿ ಓದಬಹುದು. (ವಿಳಾಸ — ವಿ. ಡಿ. ಋಷಿ, ಬಿ.ಎ., ಎಲ್ ಎಲ್. ಬಿ., ದಿ ಇಂಡಿಯನ್ ಸ್ಪಿರಿಚ್ಯುಯಲ್ ಸೊಸೈಟಿ, ಗೋವರ್ಧನದಾಸ್ ಬಿಲ್ಡಿಂಗ್ಸ್, ಗಿರ್ಗಾಂ, ಬೊಂಬಾಯಿ.—ಸತ್ಕ್ರಯವಹಾರ ಇಂಗ್ಲೀಷಿನಲ್ಲಿರಬೇಕು.)

ಈ ಜೀವಶಾಸ್ತ್ರದಲ್ಲಿ ಮುಖ್ಯವಾಗಿ ಯಾವನಾದರೂ ಸತ್ತವರೊಡನೆ ಸಂಭಾಷಣೆ ಮಾಡಬೇಕಾದರೆ ಮೊದಲು ಅವರು ಯಾರು ಎಂಬುದನ್ನು ಸ್ಥಿರಪಡಿಸುವುದು ಪದ್ಧತಿಯಾಗಿದೆ. ಇದಕ್ಕೋಸ್ಕರವಾಗಿ, ಅವನು ಈ ಭೂಮಿಯಲ್ಲಿ ಜೀವಿಸುತ್ತಿದ್ದ ಕಾಲದ ಕೆಲವು ಪರೀಕ್ಷಾರ್ಥವಾದ ಪ್ರಶ್ನೆಗಳನ್ನು ಕೇಳಿ, ಆವುಗಳಿಂದ, ಸತ್ತವನ ವ್ಯಕ್ತಿತ್ವವನ್ನು ಸ್ಥಿರಪಡಿಸುವುದು ವಾಡಿಕೆಯಾಗಿದೆ. ಹೀಗೆ, ಸತ್ತವನು ತಾನು ಪದಾರ್ಥಗಳನ್ನು ಇಡುತ್ತಿದ್ದ ಸ್ಥಾನಗಳನ್ನೂ, ತಾನು ಸತ್ತ ಕಾಲ ಮತ್ತು ರೀತಿಗಳನ್ನೂ, ತನ್ನ ಬಂಧುಗಳ ಹೆಸರು ಮುಂತಾದ ವಿವರಗಳನ್ನೂ ತಿಳಿಸಿದಮೇಲೆ, ಆ ಸತ್ತ ಜೀವವು ಇಂಥವನ್ನೇ ಎಂದು ನಿರ್ಧರಿಸಿಕ್ಕೊಂಡು ಮುಂದಿನ ವಿವರಗಳನ್ನು ತಿಳಿಯಲು ಪ್ರಾರಂಭಿಸುವುದೇ "ಜೀವಶಾಸ್ತ್ರದ ಮುಖ್ಯವಾದ ಕ್ರಮವು. ಆದುದರಿಂದ, ಮೇಲೆ ಹೇಳಲ್ಪಟ್ಟಿರುವ ಪರಲೋಕಗಳ ವಿಚಾರವನ್ನು ಕೇವಲ ಕಲ್ಪನೆಯೆಂದು ಯಾರೂ ತಿಳಿಯಬಾರದು ಮತ್ತು ಈ ಲೋಕಗಳ ವಿವರಗಳನ್ನು, ಸತ್ತಿರುವರಲ್ಲಿ ಯಾರನ್ನೂ ಕೇಳಿದ್ದರೂ ಒಂದೇ ರೀತಿ ವರ್ಣಿಸುತ್ತಾರೆ. ಆದುದರಿಂದ ಇವುಗಳೆಲ್ಲವೂ ನಿಜವೆಂದು ನಾವು ತಿಳಿಯಬೇಕಾಗಿದೆ. ಬೇಕಾದರೆ, ಮುಂದೆ ವಿವರಿಸಲಾಗುವ ಜೀವಶಾಸ್ತ್ರದ ಮಾರ್ಗಗಳನ್ನನುಸರಿಸಿ, ವಾಚಕರೇ ತಮ್ಮ ಸತ್ತಿರುವ ಬಂಧುಗಳನ್ನು ಕೇಳಿ ಈ ವಿವರಗಳನ್ನು ತಿಳಿಯಬಹುದಾಗಿದೆ.

[ಮುಂದಿನ ಸಂಚಿಕೆಯಲ್ಲಿ ಜೀವಶಾಸ್ತ್ರ ಮಾರ್ಗಗಳನ್ನು ವಿವರಿಸಲಾಗುತ್ತದೆ. ತಪ್ಪದೇ ಓದಿರಿ. ಆ ಮಾರ್ಗಗಳನ್ನು ಅನುಸರಿಸಿ, ನಿಮ್ಮ ಮರಣ ಹೊಂದಿರುವ ಪ್ರಿಯ ಬಂಧುಗಳೊಡನೆ ಮಾತನಾಡಬಹುದು. ನಿಮ್ಮ ಬಂಧುಮಿತ್ರಾದಿಗಳಲ್ಲಿಯೂ ಈ ಶಾಸ್ತ್ರತತ್ವಗಳನ್ನು ಪ್ರಚಾರಮಾಡುವುದು ಪ್ರಥಮ ಕರ್ತವ್ಯವಾಗಿರುತ್ತದೆ.]

Best Unani Medicines
Oriental Pharmacy
General Hospital Road
MYSORE

ಆಶ್ಚರ್ಯ ಗಣಿತ

ನಿನ್ನಲ್ಲಿಯ ಹಣವನ್ನು ಪೌಂಡು ಶಿಲ್ಲಿಂಗು ಪೆನ್ಸುಗಳ ರೂಪದಲ್ಲಿ ಗುರ್ತುಹಾಕು. ಆತರವಾಯ ಪೆನ್ಸುಗಳ ಸಂಖ್ಯೆಯನ್ನು ಪೌಂಡುಗಳ ಕೆಳಗೂ, ಶಿಲ್ಲಿಂಗುಗಳನ್ನು ಶಿಲ್ಲಿಂಗುಗಳ ಕೆಳಗೂ, ಪೌಂಡುಗಳ ಸಂಖ್ಯೆಯನ್ನು ಪೆನ್ಸುಗಳ ಕೆಳಗೂ, ಹಾಕಿ ಮೇಲಿನ ಸಂಖ್ಯೆಯಿಂದ ಕಳಿ. ಬಂದ ಲಬ್ಧಕ್ಕೆ, ಪುನಃ ಮೇಲಿನಂತೆ ಲಬ್ಧದಲ್ಲಿಯ ಪೆನ್ಸುಗಳ ಸಂಖ್ಯೆಯನ್ನು ಪೌಂಡುಗಳ ಕೆಳಗೂ, ಪೌಂಡುಗಳ ಸಂಖ್ಯೆಯನ್ನು ಪೆನ್ಸುಗಳ ಕೆಳಗೂ ಹಾಕಿ ಕೂಡು. ನೀನು ಮೊದಲು ಗುರ್ತುಹಾಕಿದ್ದ ಸಂಖ್ಯೆಯು ಯಾವದಿದ್ದರೂ ಉತ್ತರವು ಯಾವಾಗಲೂ ೧೭-೧೮-೧೧ ಬರುತ್ತದೆ

ಉದಾಹರಣೆ

ಮೊದಲು ಗುರ್ತುಹಾಕುವ ಸಂಖ್ಯೆ ೧೧-೮-೯ ಇರಲಿ
ಇದನ್ನು ಹಿಂತಿರುಗಿಸಿ ಕಳಿ ೯-೮-೧೧

ಲಬ್ಧ ೧-೧೯-೧೦
ಹಿಂದಿರುಗಿಸಿ ಸಂಕಲನಮಾಡು ೧೦-೧೯-೧

ಉತ್ತರ ೧೭-೧೮-೧೧

ಸೂಚನೆ—ಮೊದಲು ಗುರ್ತುಹಾಕುವ ಸಂಖ್ಯೆಯಲ್ಲಿ ಪೌಂಡುಗಳ ಮತ್ತು ಪೆನ್ಸುಗಳ ಸಂಖ್ಯೆಯು ೧೨ ರೊಳಗಿರಬೇಕು. ಏಕೆಂದರೆ, ೧೨ ಪೆನ್ಸಿಗೆ ಒಂದು ಶಿಲ್ಲಿಂಗು, ಹಾಗಿಲ್ಲದಿದ್ದಾಗ ೧೨ ಕ್ಕಿಂತ ಹೆಚ್ಚು ಪೆನ್ಸಿಗಳ ಸಂಖ್ಯೆಯನ್ನೇ ಪೆನ್ಸಿನ ಕೆಳಗೆ ಹಾಕಿ ಶಿಲ್ಲಿಂಗುಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗುತ್ತದೆ.

ಓಂ.

ಅರೆಬಿಯದ ಫ್ರೆಂಚ ಮಿಂಡೇಟಿನ ಅಡಿಯಲ್ಲಿ ಶುನ ಸಿರಿಯಾದಲ್ಲಿ ಜನರು ಫ್ರೆಂಚರ ಅಧಿಕಾರವನ್ನು ವಿರೋಧಿಸಿ ದಂಗೆಯನ್ನು ಎಬ್ಬಿಸಿರುವರು. ಇಲ್ಲಿನ ನ್ಯಾಶನಲಿಸ್ಟ್ ಪಂಗಡದವರು ಅಲ್ಲಲ್ಲಿ ಸ್ವಾತಂತ್ರ್ಯ ರಾಜಕೀಯ ಕ್ಲಬ್ಬುಗಳನ್ನು ಮಾಡಿ, ಫ್ರೆಂಚಿನ ಸರ್ಕಾರವನ್ನು ವಿರೋಧಿಸುವ ಚಳವಳಿಯ ಕೆಲಸವನ್ನು ಹಿಂದೆ ಮಾಡಿದ್ದರು. ಈ ನ್ಯಾಶನಲಿಸ್ಟ್ ಪಂಗಡದ ನಾಯಕರನ್ನು ಹಿಡಿದು ಜೈಲಿಗೆ ಕಳಿಹಿಸಲು, ದಂಗೆಯು ಪ್ರಾರಂಭವಾಗಿರತ್ತದೆ ಈ ಪಂಗಡದವರು ಈ ವಿಷಯವನ್ನು ಜನಾಂಗಸಭೆಗೆ ತಂತಿ ಮೂಲಕ ತಿಳಿಸಿರುವರು. ಫ್ರೆಂಚರು ಇಲ್ಲಿ ಅನೇಕ ಅನಾಹುತಗಳನ್ನು ನಡೆಯಿಸಿದ್ದಾರಂತೆ. ಈ ವಿಷಯವು ಪ್ರತಿಕೂಲನಾತಂತಿಗಳನೇಕ ಜನಾಂಗ ಸಭೆಗೆ ಹೋಗಿವೆ. ತಮಗೆ ಸ್ವಾತಂತ್ರ್ಯ ಕೊಡಬೇಕಾಗಿ ಇವರು ಹಟಹಿಡಿದಿರುತ್ತಾರೆ. ಕಳೆದ ಮಹಾಯುದ್ಧದಲ್ಲಿ ಇವರು ಬಹಳ ಶ್ರಮಪಟ್ಟಿರುವರು. ಒಪ್ಪಂದದ ಮಾತುಕತೆಗಳು ಬೇಗನೆ ನಡೆಯುವವು. ಈಗ ಶಾಂತಿಯು ತಲೆದೋರಿದೆ.

ಆರೋಗ್ಯ ನಿಯಮಗಳು

(೧) ಶುದ್ಧವಾಯುವನ್ನು ಮಾತ್ರ ಸೇವಿಸು. ಸಂಪೂರ್ಣ ರೀತಿಯಲ್ಲಿ ಶ್ವಾಸವನ್ನು ತೆಗೆದುಕೊಳ್ಳಲು ಅಭ್ಯಾಸಮಾಡು.

(೨) ಹೊಸದಾಗಿ ತಯಾರಿಸಿದ ಆಹಾರವನ್ನು ಮಾತ್ರ ಉಪಯೋಗಿಸು. ಅದರೊಂದಿಗೆ ತರಕಾರಿ ಮತ್ತು ಫಲಗಳು ಮುಖ್ಯವಾಗಿ ಸೇರಲಿ.

(೩) ದೇಹಸೌಂದರ್ಯದ ವಿಷಯದಲ್ಲಿ ಹೆಚ್ಚು ಗಮನವನ್ನು ಕೊಡು.

(೪) ಅವಶ್ಯಕವಿರುವಷ್ಟು ಉಡುಪನ್ನು ಮಾತ್ರ ಧರಿಸು, ಅದು ದೇಹವನ್ನು ಉಷ್ಣವಾಗಿರಿಸುವಂಥಾದ್ದಾಗಿರಲಿ. ಕೊಳೆಯಾದ ಉಡುಪನ್ನು ಧರಿಸಬೇಡ.

(೫) ವಿಷಪದಾರ್ಥಗಳು ದೇಹದಿಂದ ದೂರವಾಗಲಿಕ್ಕಾಗಿ ವ್ಯಾಯಾಮವನ್ನು ತೆಗೆದುಕೋ.

(೬) ದೇಹಕ್ಕೆ ಸಾಕಾದಷ್ಟು ವಿಶ್ರಾಂತಿಯನ್ನು ಕೊಡು.

(೭) ಯಾವ ವಿಷಯದಲ್ಲಿಯಾಗಲಿ ಮಿತಿಯನ್ನರಿತು ವರ್ತಿಸು.

(೮) ದೇಹದೊಳಗಿನ ಮಲಿನಗಳು ದೂರವಾಗಲು ದಿನಂಪ್ರತಿ ೨-೩ ಶೇರಿನಷ್ಟು ಶುದ್ಧ ಜಲವನ್ನು ಕುಡಿ.

(೯) ಶುದ್ಧ ಜಲವು ಪಾನೀಯದ್ರವ್ಯಗಳಲ್ಲಿ ಸರ್ವೋತ್ತಮವಾದದ್ದು. ಕುಡಿಯುವ ಜಲಕ್ಕೆ ಮತ್ತೆ ಯಾವ ಪದಾರ್ಥವನ್ನೂ ಬೆರಸಬೇಡ.

(೧೦) ಸಂಪೂರ್ಣ ವಿಶ್ರಾಂತಿಯನ್ನು ಎಷ್ಟು ಹೊತ್ತು ತೆಗೆದುಕೊಳ್ಳುವಿಯೋ ಅದನ್ನನುಸರಿಸಿ ನೀನು ಜೀವಿಸುವ ಕಾಲವು ನಿರ್ಧರವಾಗುವದು.

(೧೧) ಮಧ್ಯರಾತ್ರಿಗೆ ಪೂರ್ವದಲ್ಲಿ ಒಂದು ಗಂಟೆಕಾಲ ಮಾಡುವ ನಿದ್ದೆಯು, ಮಧ್ಯರಾತ್ರಿಯ ಅನಂತರ ಮಾಡುವ ಎರಡು ಗಂಟೆಸುಕಾಲದ ನಿದ್ದೆಗೆ ಸರಿಹೋಗುತ್ತದೆ.

(೧೨) ಯಾವ ಮಾದಕ ಪದಾರ್ಥಗಳನ್ನು ಉಪಯೋಗಿಸದೆ ಇರಪರನ್ನೇ ಆರೋಗ್ಯಭಾಗ್ಯವು ವರಿಸುವರು, ಅಮಾದಾಂಗ ಆಕೆಯು ಪಾಣಿಗ್ರಹಣವನ್ನು ಮಾಡತಿಳಿಸಿವರು ಮದ್ಯಸಾರಾದಿ ದುರ್ವ್ಯಸನಗಳಿಂದ ದೂರವಾಗತಕ್ಕದ್ದು.

(೧೩) ಮನುಷ್ಯನೆಂದರೆಕಷ್ಟವಿಲ್ಲದಿರುವದಿಲ್ಲ. ಹೀಗಿದ್ದರೂ ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟಿರಲು ಅಭ್ಯಾಸಿಸತಕ್ಕದ್ದು.

(೧೪) ದೇಹಕ್ಕೆ ಅಸ್ವಸ್ಥತೆಯುಂಟಾಗುವದೆಂಬ ತೋರಿಕೆಯು ಒಂದಾಗಲೇ ಅಸ್ವಸ್ಥತೆಯು ಪ್ರಾಪ್ತವಾಗದಂತೆ ತಕ್ಕ ಪ್ರಯತ್ನಗಳನ್ನು ಮಾಡು.

ಅನೇರಿಕಾದಲ್ಲಿ ೧೫೦೦೦ ರೂಪಾಯಿಗೆ ವಿಕ್ರಿದ ಉತ್ಪತ್ತಿಯುಳ್ಳ ಜನರ ಪಟ್ಟಿಯ ಒಂದು ಪುಸ್ತಕವು ಸರಕಾರದಿಂದ ಪ್ರಕಟವಾಗಿರುತ್ತದೆ. ಇತ್ತೀಗೆಲ್ಲ ಸಿನೆಮಾ ನಟನಿಗಾರರ ಹೆಸರು ಬಲವಾಗಿ ಕಣ್ಣಿಗೆ ನಾಟುತ್ತಿವೆ. ಇವರಿಗೆ ಲಕ್ಷೋಪಲಕ್ಷ ರೂಪಾಯಿ ತಲಬು ಬರುತ್ತದೆಂದು ಇದರಲ್ಲಿ ವ್ಯಕ್ತವಾಗುತ್ತದೆ. ಅಲ್ಲಿನ ಪ್ರಸಿದ್ಧ ನಟನಿಗಾರಳಾದ ಮೆ|| ವೆಸ್ಟ್ ಎಂಬ ಮಳಿಗೆ ಒಂದು ವರ್ಷಕ್ಕೆ ೬೩,೯೩೩ ಪೌಂಡುಗಳು (ಸಾಧಾರಣವಾಗಿ ಲ|| ಲಕ್ಷ್ಯ) ರೂಪಾಯಿ ಉತ್ಪತ್ತಿಯಂತೆ. ಸಿನೆಮಾ ನಟನಿಗಾರರ ಉತ್ಪತ್ತಿಯಲ್ಲಿ ಇವಳಿಗೆ ಪ್ರಥಮಸ್ಥಾನವು ದೊರಕಿರುತ್ತದೆ. ಹೀಗೆಳ ಲಕ್ಷ್ಯ, ೩|| ಲಕ್ಷ್ಯ, ೩ ಲಕ್ಷ್ಯ ಉತ್ಪತ್ತಿಯುಳ್ಳ ಅನೇಕ ನಟನಟಿಯರಿರುವರು. ಬರಿಸಬಳ್ಳದಿಂದಾಗಲಿ, ಅವರಿಗೆ ಈ ರೀತಿ ಉತ್ಪತ್ತಿಯಾಗುತ್ತಿದೆ

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು ಫೀಜ್ ಬಚ್ಚಿರಿಗೆ ೧—೪—೦ ರೂಪಾಯಿ ಮಾತ್ರ

ತಾಜಕ ಜ್ಯೋತಿಷ್ಯರು,
೧೦೬೮ ಚಾಮರಾಜ ಅಗ್ರಹಾರ, ಮೈಸೂರು.



ಶಕ್ತಿ ಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯ ವಿರುವೆ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯ ವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವುದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವ ನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿ ಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ವಿಕಾರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ — ಮನುಷ್ಯ ಮಾತ್ರದವಂಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯು ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಅತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಿಟ್ಟಿದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರಿನ ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ

ಶಕ್ತಿ ಸುಧಾ

ವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಸಿಸುತ್ತಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವನ್ಯೌಷಧಿಗಳನ್ನೆಲ್ಲಿ ಪೇಡಲುಗಳೂ, ಸರ್ಟಿಫಿಕೇಟುಗಳೂ ಒಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿದ್ದು, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದ ಮದ್ದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಅಹಿತ ಪಾಕೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲತುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊರದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದಿಸುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ಕಸುಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸೌಜವಾದ ಸೌಂದರ್ಯವನ್ನು ವೃದ್ಧಿಪಡಿಸುವುದು.

ವಿದ್ಯಾರ್ಥಿಗಳು ಪಾಠಗಳನ್ನು ಜೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು.

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವವರಲ್ಲಿ ಅವ್ಯರ್ಥವಾಯವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ. ಟಿ. ಖ. ದೇರೆ.

ಶಕ್ತಿಸುಧಾ ಕಾರ್ಯಾಲಯ ಸತ್ಯವಾದಿ ಬಿಲ್ಡಿಂಗ್ಸ್, ಚಾಮರಾಜೇಪ್ರರಂ, ಮೈಸೂರು

Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವುದು ಪರಸ್ಥಳಕ್ಕೆ

ಸಂಪುಟ 19] ಮೈಸೂರು, ಬುಧವಾರ 12 ನೆ ಫೆಬ್ರವರಿ 1936 [ಸಂಚಿಕೆ 23

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! - ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಯವನ್ನೂ ಉಂಟುಮಾಡುತ್ತದೆ. ಇದ್ದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ಶರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಸ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರೀಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಸಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು:
ಮಿ| ಜಿ. ಎಸ್. ವೆಂಕಟರಾವ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE QUILON BANK

5 per cent Three Year Cash Certificates

— are —

issued at all the offices of the Bank.

For particulars please apply to the Head Office, Quilon, or Branches :

Alleppey	Ernakulam	Royapettah
Alwaye	Jaffna	Shertallai
Bangalore	Kayamkulam	Secunderabad
C. & M. Station	Kottayam	Tenkasi
Bangalore City	Madras	Tinnevelly Jn.
Chirayinkil	Madura	Tinnevely Town
Cochin	Mount Road	Trichinopoly
Coimbatore	Mysore	Trivandrum
Coonoor	Nagarcoil	Tuticorin
Erode	Quilon	Vellore

The Quilon Bank Limited

(Incorporated in Travancore, 1919)

Member -- Reserve Bank of India

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು ಈಗಲೇ ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

Wanted

Agents with Pay and Allowances to canvass subscribers and advertisers for

SATYAVADI

Apply in person or through post to

The Manager,
Satyavadi Office, Satyavadi Buildings,
Chamarajpuram, Mysore.